## ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
## ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸಿ.ಸಿ ನಂ. 3984 /20 18

ಸಿಡಬ್ಲ್ಯೂ:01

ಪಿಡಬ್ಲ್ಯೂ: 01

ಸಾಕ್ಷಿದಾರರ ಹೆಸರು : ಕೆ ರವಿ

ತಂದೆಯ ಹೆಸರು : ಬಿನ್ ಕೃಷ್ಣಪ್ಪ

ವಯಸ್ಸು : 46 ವರ್ಷ

ಉದ್ಯೋಗ : ಪೊಲೀಸ್ ಇನ್ಸಪೆಕ್ಟರ್

ವಾಸಸ್ಥಳ : ಬೆಂಗಳೂರು

ದಿನಾಂಕ: 05.10.2024 ರಂದು ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸ.ಅ ರವರಿಂದ

2016 ರಿಂದ 2017 ರವರೆಗೆ ನಾನು ವೈಟ್‌ಫೀಲ್ಡ್ ಪೋಲಿಸ ಠಾಣೆಯಲ್ಲಿ ಪೊಲಿಸ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 03.02.2017 ರಂದು ಬೆಳಿಗ್ಗೆ 11.15 ಗಂಟೆ ಸಮಯದಲ್ಲಿ ನಾನು ಗಸ್ತಿನಲ್ಲಿದ್ದಾಗ ನನ್ನ ಜೊತೆಗೆ ಚಾಸಾ 7 ರಿಂದ 10 ಇದ್ದರು. ನಾವು ವೈಟಪೀಲ್ಡ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದೆವು. ಓ ಪಾರ್ಮ ಸಿಗ್ನಲ್ ಕಾಡುಗೋಡಿ ವಾರ್ಡನ ಬಿಬಿಎಂಪಿ ಸದಸ್ಯರಾದ ಮುನಿಸ್ವಾಮಿ ಮತ್ತು ಇತರರು ಬೆಂಗಳೂರು ನಗರಾಬಿವೃದ್ಧಿ ಸಚಿವರಾದ ಚಾಸಾ 2 ಮತ್ತು ಇತರೆ ಬಿಬಿಎಂಪಿ ಸದಸ್ಯರು ಹಾಗೂ

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-1.pdf

ಅಧಿಕಾರಿಗಳು ಬಸನಲ್ಲಿ ವಾರ್ಡ ವೀಕ್ಷಣೆಗೆ ಹೋಗುತ್ತಿದ್ದಾಗ ಬಸನ್ನು ಆರೋಪಿತರು ತಡೆದು ಗಲಾಟೆ ಮಾಡುತ್ತಿದ್ದಾರೆ ಎಂದು ನನಗೆ ಮಾಹಿತಿ ಬಂತು ನಂತರ ನಾನು ಮತ್ತು ನನ್ನ ಸಿಬ್ಬಂದಿಯವರಾದ ಚಾಸಾ 7 ರಿಂದ 10 ಘಟನಾ ಸ್ಥಳಕ್ಕೆ ಹೋಗಿ ಅಲ್ಲಿ ಆರೋಪಿಗಳು ತಮಗೆ ಮಾಹಿತಿ ಕೊಡದೇ ನಮ್ಮ ವಾರ್ಡ ವೀಕ್ಷಣೆಗೆ ಹೇಗೆ ಬಂದಿದ್ದಿರಿ ಎಂದು ಜೋರಾಗಿ ಕಿರುಚಾಡುತ್ತ ಬಸನ್ನು ತಡೆದಿದ್ದರು. ಕೂಡಲೇ ನಾನು ಮತ್ತು ನನ್ನ ಸಿಬ್ಬಂದಿಯವರು ರಸ್ತೆಯಿಂದ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟೆವು. ನಾನು ಅದೇ ದಿನ ಠಾಣೆಗೆ ಬಂದು ಮದ್ಯಾಹ್ನ 12.30 ಗಂಟೆಗೆ ಪ್ರ.ವ.ವ ಕೊಟ್ಟಿರುತ್ತೇನೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು ನಿಪಿ.1ಎ ಎಂದು ಗುರುತಿಸಲಾಯಿತು. ನಾನು ಘಟನೆಯ ವೇಳೆ ಪೊಟೊಗಳನ್ನು ತೆಗೆದಿರುತ್ತೇನೆ. ಸಾಕ್ಷಿಯು ಪೋಟೊಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 2 ರಿಂದ 7 ಎಂದು ಗುರುತಿಸಲಾಯಿತು. ನಿಪಿ 2 ರಿಂದ 7 ರಲ್ಲಿರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಗಳು ಗೈರು ಹಾಜರಿದ್ದು ಅವರ ಗುರುತಿಸುವಿಕೆಯ ಬಗ್ಗೆ ಆರೋಪಿತರ ವಕೀಲರು ತಕರಾರು ಮಾಡಿರುವುದಿಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದ

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-1.pdf

ನಾನು ಗಸ್ತು ಕರ್ತವ್ಯದಲ್ಲಿದ್ದೆ ಎಂಬುವುದಕ್ಕೆ ದಾಖಲೆ ಕೊಟ್ಟಿಲ್ಲ. ವೈಟಪೀಲ್ಡ ಮುಖ್ಯ ರಸ್ತೆಯಲ್ಲಿ ನಿರ್ದಿಷ್ಟವಾಗಿ ಯಾವ ಜಾಗದಲ್ಲಿ ಇದ್ದೆ ಎಂಬುವುದನ್ನು ನನ್ನ ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಚಾಸಾ 2 ರವರು ವಾರ್ಡ ವೀಕ್ಷಣೆಗೆ ಬರುವ ಮಾಹಿತಿ ನಮ್ಮ ಠಾಣೆಗೆ ಇರಲಿಲ್ಲ. ನಮ್ಮ ಠಾಣೆಯ ಅಧಿಕಾರ ವ್ಯಾಪ್ತಿ  ವೈಟಪೀಲ್ಡ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರುತ್ತದೆ. 1 ನೇ ಆರೋಪಿ ಕಾಡುಗೋಡಿ ವಾರ್ಡಿನ ಕಾರ್ಪೊರೇಟರ್ ಆಗಿದ್ದರು. ಆರೋಪಿತರು ತಮಗೆ ಮಾಹಿತಿ ನೀಡದೇ ಚಾಸಾ 2 ರವರು ವಾರ್ಡ ವೀಕ್ಷಣೆಗೆ ಬಂದಿರುತ್ತಾರೆ ಎಂದು ಕಿರುಚಾಡುವುದನ್ನು ನಾನು ರೆಕಾರ್ಡ ಮಾಡಿಕೊಂಡಿಲ್ಲ. ಗಲಾಟೆಯ ಸಮಯದಲ್ಲಿ ಪೊಟೊಗಳನ್ನು ನಾನೇ ತೆಗೆದಿರುತ್ತೇನೆ ಮತ್ತು ಗಲಾಟೆ ಮಾಡುವವರನ್ನು ಸಹ ತೆರವುಗೊಳಿಸಿರುತ್ತೇನೆ. ಪೊಟೊ ತೆಗೆದ ವಿಚಾರವನ್ನು ನಿಪಿ 1 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ದೂರು ಕೊಡುವ ಸಮಯದಲ್ಲಿ ಪೊಟೊಗಳನ್ನು ನಾನು ತನಿಖಾಧಿಕಾರಿಗೆ ಕೊಟ್ಟಿಲ್ಲ ಸಾಕ್ಷಿ ಮಂದುವರೆದು ನಂತರ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 2 ರಿಂದ 7 ಪೊಟೊಗಳನ್ನು ನನ್ನ ಮೊಬೈಲನಿಂದ ತೆಗೆಯಲಾಗಿದೆ ಎಂಬುವುದಕ್ಕೆ ಯಾವುದೇ ದಾಖಲಾತಿ ಇಲ್ಲ. ನಿಪಿ 2 ರಿಂದ 7 ಪೊಟೊಗಳ ಮೇಲೆ ದಿನಾಂಕ ಮತ್ತು ವೇಳೆ ನಮೂದು ಇಲ್ಲ ಎಂದರೆ ಸರಿ. ನಿಪಿ 2 ರಿಂದ 7 ಪೊಟೊಗಳಲ್ಲಿ ಬಸನ್ನು ತಡೆದಿರುವ ಪೊಟೊಗಳು ಇಲ್ಲ ಎಂದರೆ ಸರಿ. ಓ ಪಾರ್ಮ ಜಂಕ್ಷನ್‌ಗೆ ನಾಲ್ಕು ರಸ್ತೆಗಳು ಸೇರುತ್ತವೆ ಎಂದರೆ ಸರಿ. ಒಂದು ರಸ್ತೆ

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-1.pdf

ವೈಟಪೀಲ್ಡಗೆ, ಒಂದು ರಸ್ತೆ ಕಾಡುಗೋಡಿಗೆ, ಒಂದು ರಸ್ತೆ ಚನ್ನಸಂದ್ರಕ್ಕೆ ಮತ್ತು ಇನ್ನೊಂದು ರಸ್ತೆ ಬೆಂಗಳೂರಿಗೆ ಹೋಗುತ್ತದೆ ಎಂದರೆ ಸರಿ. ನನ್ನ ದೂರಿನಲ್ಲಿ ನಿರ್ದಿಷ್ಟವಾಗಿ ಯಾವ ರಸ್ತೆಯಲ್ಲಿ ಬಸನ್ನು ತಡೆ ಹಿಡಿದಿದ್ದರು ಎಂಬುದನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋದಾಗ 15 ರಿಂದ 20 ಜನ ಇದ್ದರು. ಬಸನ್ನು 15 ರಿಂದ 20 ಜನ ತಡೆ ಹಿಡಿದಿದ್ದರು. ಆರೋಪಿಗಳು ಬಸನ್ನು ತಡೆ ಹಿಡಿದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರ ನಿರ್ದೇಶನದ ಮೇರೆಗೆ ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ಚಾಸಾ 2 ರವರು ಬೇರೆ ಬೇರೆ ಪಕ್ಷದವರಾಗಿರುತ್ತಾರೆ ಎಂದರೆ ಸರಿ. ನಾನು ಸುಳ್ಳು ದೂರಿನ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಎ.ಸಿ.ಜೆ.ಎಂ.,ಬೆಂಗಳೂರು

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-1.pdf

www.ecourtsindia.com